ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-238/2016/ಡಿಆರ್‌ಇ-5
ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-237/2016/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು 560 001,
ದಿನಾಂಕ:22-02-2018

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ : ಈ ಎರಡು ಪ್ರಕರಣದ ದೂರುದಾರರಾದ ಶ್ರೀ ವಿಜಯಕುಮಾರ್ ತಾಂದಳೆ, ನಂ:ಎಂ.ಐ.ಜಿ.121, ಹೌಸಿಂಗ್ ಬೋರ್ಡ್, ಮೋಕಾ ರೋಡ್, ಗಾಂಧಿನಗರ, ಬಳ್ಳಾರಿ ಇವರು ಸಲ್ಲಿಸಿರುವ ದೂರಿನ ಮೇಲೆ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ

****

ಈ ಎರಡು ಪ್ರಕರಣದ ದೂರುಗಳನ್ನು ಶ್ರೀ ವಿಜಯಕುಮಾರ್ ತಾಂದಳೆ, ನಂ:ಎಂ.ಐ.ಜಿ.121, ಹೌಸಿಂಗ್ ಬೋರ್ಡ್, ಮೋಕಾ ರೋಡ್, ಗಾಂಧಿನಗರ, ಬಳ್ಳಾರಿ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-238/2016/ ಡಿಆರ್‌ಇ-5 ರಲ್ಲಿ (1) ವಿಶೇಷ ಭೂಸ್ವಾಧೀನ ಅಧಿಕಾರಿಗಳು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ದಾವಣಗೆರೆ ಮತ್ತು (2) ಶ್ರೀ ಈ. ಬಾಲಕೃಷ್ಣಪ್ಪ, ಹಿಂದಿನ ಭೂಸ್ವಾಧೀನಾಧಿಕಾರಿಗಳು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ದಾವಣಗೆರೆ ಮತ್ತು ಪ್ರಸ್ತುತ ವಿಶೇಷ ಭೂಸ್ವಾಧೀನಾಧಿಕಾರಿಗಳು, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಚಿತ್ರದುರ್ಗ ಹಾಗೂ ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-237/2016/ಡಿಆರ್‌ಇ-5 ರಲ್ಲಿ ತಹಶೀಲ್ದಾರರು, ತಾಲ್ಲೂಕು ಕಛೇರಿ, ಬಳ್ಳಾರಿ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ ಸಲ್ಲಿಸಿದ್ದಾರೆ.

2. ದೂರಿನ ಸಂಕ್ಷಿಪ್ತ ವಿವರ:

ಸುವರ್ಣ ವಸ್ತ್ರ ಯೋಜನೆಯ ಅಡಿಯಲ್ಲಿ ಬಳ್ಳಾರಿಯ ಆಲದಹಳ್ಳಿಯಲ್ಲಿ ಬಳ್ಳಾರಿ ಗಾರಮೆಂಟ್ಸ್ ಎಕ್ಸ್‌ಪೋರ್ಟ ಮ್ಯಾನುಪ್ಯಾಕ್ಚರಿಂಗ್ ಅಸೋಶೀಯೇಶನ ಇವರಿಗೆ 50 ಜಮೀನನ್ನು ಮಂಜೂರು ಮಾಡಿದ್ದರು. ಸತತ 3-4 ವರ್ಷಗಳ ಹೋರಾಟದಿಂದ ಈ ಸಂಸ್ಥೆಗೆ ಮಂಜೂರಾಗಿದ್ದ ಜಮೀನಿನ ಬಗ್ಗೆ ಚಿತಾವಣೆ ನಡೆಸಿ ಭೂಸ್ವಾಧೀನಾಧಿಕಾರಿಗಳು ಮತ್ತು ಜಿಲ್ಲಾಡಳಿತ ಸಂಚಿನಿಂದ ಭೂಮಾಪಿಯಾ ಒಡೆಯನ ಹೆಸರಿಗೆ ನೋಂದಾವಣಿ ಮಾಡಿ ಬಳ್ಳಾರಿ ಗಾರಮೆಂಟ್ಸ್ ಎಕ್ಸ್‌ಪೋರ್ಟ ಪ್ರೈವೇಟ್ ಲಿಮಿಟೆಡ್ ಎನ್ನುವ ಹೆಸರಿನಲ್ಲಿ ನೋಂದಣಿ ಮಾಡಿಸಿರುವುದು ಕಾನೂನುಬಾಹಿರವಾಗಿದೆ. ಮುಂದೊಂದು ದಿನ ಅವುಗಳನ್ನು ನಿವೇಶನವನ್ನಾಗಿ ಪರಿವರ್ತಿಸಿ ಮಾರಾಟ ಮಾಡಿಕೊಂಡು ಹೋಗಬಹುದಾಗಿದೆ. ಆದ್ದರಿಂದ, ಎದುರದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಈ ಪ್ರಕರಣಗಳನ್ನು ಜಿಲ್ಲಾಧಿಕಾರಿಗಳು ಬಳ್ಳಾರಿ ಇವರಿಗೆ ತನಿಖೆಗೆ ವಹಿಸಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

(ಎ) ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರು ಪ್ರಕರಣವನ್ನು ಸಹಾಯಕ ಆಯುಕ್ತರು, ಬಳ್ಳಾರಿ ಇವರಿಗೆ ವಹಿಸಿದ್ದಾರೆ. ಸದರಿ ಅಧಿಕಾರಿಗಳು ತಮ್ಮ ವರದಿಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ., ದಾವಣಗೆರೆ ಇವರು ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯಪಾಲಯ ಇಂಜಿನಿಯರ್, ಕೆ.ಐ.ಎ.ಡಿ.ಬಿ., ಬಳ್ಳಾರಿ ಇವರಿಗೆ ದಿನಾಂಕ: 17-1-2015 ರಂದು ಜಮೀನನ್ನು ಹಸ್ತಾಂಸರಿ ತದನಂತರ ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೆಟ್ ಲಿಮಿಟೆಡ್ ಇವರಿಗೆ ಜಮೀನನ್ನು ಹಸ್ತಾಂತರಿಸಲು ನಿರ್ದೇಶಿಸಿದ್ದಾರೆ.

(ಬಿ) ಮುಂದುವರೆದು, ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಮ್ಯಾನುಫ್ಯಾಕ್ಚರಿಂಗ್ ಅಸೋಶಿಯೇಶನ್ ಇವರಿಗೆ ಜಮೀನು ಮಂಜೂರಾಗಿರುತ್ತದೆ. ತದನಂತರ 99 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಕರಾರನ್ನು ಕಂಪನಿಯ ಪ್ರತಿನಿದಿ ಮಹ್ಮದ್ ಅಯೂಬ್ ಇವರ ಹೆಸರಿಗೆ ನೋಂದಣಿ ಮಾಡಿಸಿದ್ದಾರೆ. ಕಾರ್ಯದರ್ಶಿಗಳು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಕೇಂದ್ರ ಸರ್ಕಾರದ ಜವಳಿ ಮಂತ್ರಾಲಯದ ಜಂಟಿ ನಿರ್ದೇಶಕರಿಗೆ ಪತ್ರ ಬರೆದು ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಮ್ಯಾನುಫ್ಯಾಕ್ಚರಿಂಗ್ ಅಸೋಶಿಯೇಶನ್ ಇದು ಎಸ್.ಪಿ.ವಿ. ಆಗಿ ಪ್ರಮೋಟ್ ಆಗಿದ್ದು, 80 ಜನ ಸದಸ್ಯರನ್ನು ಹೊಂದಿದ್ದು, ಕಂಪನಿ ಕಾಯ್ದೆಯಲ್ಲಿ ಪ್ರೈವೆಟ್ ಲಿಮಿಟೆಡ್ ಕಂಪನಿ ಅಂತ ನೋಂದಣಿ ಆಗಿರುತ್ತದೆ.

(ಸಿ) ಸದರಿ ಸಂಸ್ಥೆಯು ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೆಟ್ ಲಿಮಿಟೆಡ್ ಎಂಬ ಎಸ್.ಪಿ.ವಿ. ಸ್ಥಾಪಿಸಿರುವುದರಿಂದ ತ್ವರಿತವಾಗಿ ಜಮೀನು ಮಂಜೂರು ಮಾಡಲು ಕೋರಿರುತ್ತಾರೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಚರ್ಚಿಸಿ ಎಸ್.ಪಿ.ವಿ.ಗೆ ಮಂಜೂರು ಮಾಡುವ ಬಗ್ಗೆ ಚರ್ಚಿಸಲಾಗಿದೆ. ದೂರುದಾರರಾದ ಶ್ರೀ ವಿಜಯಕುಮಾರ ಇವರು ಜಂಟಿ ನಿರ್ದೇಶಕರಿಗೆ ಪತ್ರವನ್ನು ಬರೆದು ರೂ.10 ಕೋಟಿಗಳನ್ನು ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ದೂರುದಾರರೇ ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್‌ನ ಶೇರ್ ಹೋಲ್ಡರ್ ಆಗಿದ್ದರು. ದೂರುದಾರರು ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಮ್ಯಾನುಫ್ಯಾಕ್ಚರಿಂಗ್ ಅಸೋಶಿಯೇಶನ್ ಇದರ ಚೇರ್‌ಮನ್ ಆಗಿದ್ದು, ಎಸ್.ಪಿ.ವಿ. ಸ್ಥಾಪನೆ ಮಾಡಿಕೊಳ್ಳಲು ಸರ್ಕಾರದ ಇಲಾಖೆಗಳೊಂದಿಗೆ ಪತ್ರ ವ್ಯವಹಾರ ನಡೆಸಿದ್ದಾರೆ ಹಾಗೂ ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್‌ನ ಮೊದಲನೇ ಚೇರ್‌ಮನ್ ಅವರೇ ಆಗಿರುತ್ತಾರೆ. ಹಣಕಾಸಿನ ವ್ಯವಹಾರದಲ್ಲಿ ಲೋಪದೋಷಗಳು ಕಂಡುಬಂದಿವೆ ಅಂತ ಆಡಿಟ್ ವರದಿ ಬಂದಿದ್ದರಿಂದ, ಅವರು ತದನಂತರ ರಾಜೀನಾಮೆ ಕೊಟ್ಟಿರುತ್ತಾರೆ ಅಂತ ತಿಳಿಸಿದ್ದಾರೆ. ಆದ್ದರಿಂದ, ದಿನಾಂಕ: 17-1-2015 ರಂದು ಅಭಿವೃದ್ಧಿ ಅಧಿಕಾರಿಗಳು, ಕೆ.ಐ.ಎ.ಡಿ.ಬಿ., ಬಳ್ಳಾರಿ ಇವರಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ., ಬಳ್ಳಾರಿ ಇವರು ಬರೆದ ಪತ್ರದಲ್ಲಿ ಸದರಿ ಜಮೀನನ್ನು ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಭೂಸ್ವಾಧೀನವಾಗಿದೆ ಅಂತ ನಮೂದಿಸಿ ಜಮೀನು ವರ್ಗಾವಣೆಯ ಬಗ್ಗೆ ಪ್ರಸ್ತಾಪಿಸಿರುವುದು

--2

ಕಂಡುಬರುತ್ತದೆ. ಈ ಹೆಸರಿನಲ್ಲಿ ಯಾವುದೇ ಆದೇಶ ಇಲ್ಲದೇ ಇರುವುದನ್ನು ಪರಿಶೀಲಿಸದೇ ಹಸ್ತಾಂತರಕ್ಕೆ ಸೂಚಿಸಿರುವುದು ಕ್ರಮಬದ್ಧವಾಗಿರುವುದಿಲ್ಲ ಅಂತ ಅಭಿಪ್ರಾಯಪಟ್ಟಿದ್ದಾರೆ.

4. ದಿನಾಂಕ: 17-1-2015 ರಂದು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ., ದಾವಣಗೆರೆ ಈ ಹುದ್ದೆಯಲ್ಲಿ ಯಾರು ಕರ್ತವ್ಯ ನಿರ್ವಹಿಸುತ್ತಿದ್ದರು ಎನ್ನುವ ಬಗ್ಗೆ ತನಿಖಾ ವರದಿಯಲ್ಲಿ ನಮೂದಿಸಿರುವುದಿಲ್ಲ. ದೂರುದಾರರು ಸಹ ತಾವು ಮೆ।। ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್ ರಲ್ಲಿ ಮೊದಲ ಚೇರಮನ್ ಆಗಿದ್ದ ವಿಷಯವನ್ನು ವಿವಾದಿಸುವುದಿಲ್ಲ. ಆದ್ದರಿಂದ, ದಿನಾಂಕ: 17-1-2015 ರಂದು ಭೂಸ್ವಾಧೀನಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎನ್ನುವ ಬಗ್ಗೆ ವಿವರಗಳನ್ನು ಸಲ್ಲಿಸಲು, ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ., ದಾವಣಗೆರೆ ಇವರಿಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

5. ಅದರಂತೆ, ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ., ದಾವಣಗೆರೆ ಇವರು ತಮ್ಮ ವರದಿಯನ್ನು ಸಲ್ಲಿಸಿದ್ದು, ತತ್ಕಾಲದಲ್ಲಿ ಶ್ರೀ ಈ. ಬಾಲಕೃಷ್ಣಪ್ಪ ಕೆ.ಎ.ಎಸ್. ಇವರು ವಿಶೇಷ ಭೂಸ್ವಾಧೀನಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಹಾಗೂ ಹಾಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಚಿತ್ರದುರ್ಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಅಂತ ವರದಿಯನ್ನು ಸಲ್ಲಿಸಿದ್ದಾರೆ.

6. ಶ್ರೀ ಈ. ಬಾಲಕೃಷ್ಣಪ್ಪ ಕೆ.ಎ.ಎಸ್. ಇವರು ವಿಶೇಷ ಭೂಸ್ವಾಧೀನಾಧಿಕಾರಿಗಳು ಇವರನ್ನು ಈ ಪ್ರಕರಣದಲ್ಲಿ ಕಂಪ್ಲೇಂಟ್/ಉಪಲೋಕ್/ಬಿ.ಎಲ್.ಡಿ-238/2016 ರಲ್ಲಿ 2ನೇ ಎದುರುದಾರರನ್ನಾಗಿ ಸೇರ್ಪಡೆ ಮಾಡಿಕೊಂಡು ಅವರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

7. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ಕಾರಿ ಗಾಯರಾಣಾ ಜಮೀನಿನ ಪೈಕಿ 50 ಎಕರೆ ಜಮೀನನ್ನು ತಗ್ಗಿಸಿ ನಿಯಮಾನುಸಾರ ಕೆ.ಐ.ಎ.ಡಿ.ಬಿ. ಮುಖಾಂತರ ಜಿನ್ಸ್ ಕ್ಲಸ್ಟರ್ ಪಾರ್ಕ ಸ್ಥಾಪಿಸುವ ಸಲುವಾಗಿ ಮೆ।। ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಮ್ಯಾನ್ಯೂಪ್ಯಾಕ್ಚರಿಂಗ್ ಇವರಿಗೆ ಮಂಜೂರು ಮಾಡಲು ಅನುಮೋದನೆ ನೀಡಿದ್ದು ಡಿ.ಡಿ. ಮುಖಾಂತರ ಹಣವನ್ನು ಕಟ್ಟಿಸಿ ಛಾಪಾ ಕಾಗದದಲ್ಲಿ ಒಪ್ಪಂದ ಪಡೆಯಲು ತಿಳಿಸಲಾಗಿತ್ತು. ಜವಳಿ ಅಭಿವೃದ್ಧಿ ಆಯುಕ್ತರು ಕಾರ್ಯನಿರ್ವಾಹಕ ಅಧಿಕಾರಿಗಳು, ಕೆ.ಐ.ಎ.ಡಿ.ಬಿ. ಬೆಂಗಳೂರು ಇವರಿಗೆ ಬರೆದ ಪತ್ರದಲ್ಲಿ ಮೆ।। ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್ ಅಂತ ನಮೂದಿಸಿದ್ದಾರೆ. ಇದೇ ಹೆಸರಿನ ಲೇಟರ್ ಹೆಡ್‌ನಲ್ಲಿ ಕಾರ್ಯಗತಗೊಳಿಸಲು ಕೋರಿರುತ್ತಾರೆ. ಆದರೆ ದೂರು ಸಲ್ಲಿಸುವಾಗ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಮ್ಯಾನ್ಯೂಪ್ಯಾಕ್ಚರಿಂಗ್ ಅಸೋಸಿಯೇಶನ್ ಎನ್ನುವ ಲೇಟರ್ ಹೆಡ್‌ನಲ್ಲಿ ದೂರನ್ನು ಸಲ್ಲಿಸಿದ್ದಾರೆ. ಕೆ.ಐ.ಎ.ಡಿ.ಬಿ. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಕಛೇರಿ ರಶೀದಿಯಲ್ಲಿ ಮೆ।। ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್ ಇವರಿಂದ ಹಣ ಸ್ವೀಕೃತವಾಗಿದೆ. ದೂರುದಾರರೇ ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ನೀಡಿ ದಿಕ್ಕು ತಪ್ಪಿಸಿರುತ್ತಾರೆ. ಜಮೀನು ಹಸ್ತಾಂತರಿಸುವ ಪ್ರಕ್ರಿಯೆಯನ್ನು ಅಭಿವೃದ್ಧಿ ಶಾಖೆಯ ಅಧಿಕಾರಿಗಳು ನಿಯಮಾನುಸಾರ ಸಂಬಂಧಪಟ್ಟ ವ್ಯಕ್ತಿ,

ಸಂಘ ಅಥವಾ ಕಂಪನಿಗೆ ಜಮೀನಿನ ಹಸ್ತಾಂತರ ಮಾಡುವ ಬಗ್ಗೆ ಕ್ರಮವನ್ನು ವಹಿಸುತ್ತಾರೆ. ಆದ್ದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

8. ಈ ಪ್ರಕರಣದ ಕಡತವನ್ನು ಪುನಃ ಸಂಪೂರ್ಣವಾಗಿ ಪರಿಶೀಲಿಸಿದ್ದೇನೆ. ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ-238/2016 ರಲ್ಲಿನ 2ನೇ ಎದುರುದಾರರು ವಿಶೇಷ ಭೂಸ್ವಾಧೀನ ಅಧಿಕಾರಿಗಳು ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೆಟ್ ಲಿಮಿಟೆಡ್ ರವರ ಬರೆದ ಪತ್ರದ ಆಧಾರದ ಮೇಲೆ ಜಮೀನು ಹಸ್ತಾಂತರಕ್ಕೆ ಅನುಮತಿಸಿದ್ದು, ಸದರಿ ಪತ್ರದಲ್ಲಿ ಜಮೀನು ಎಸ್.ಪಿ.ವಿ. ಇವರ ವಶದಲ್ಲಿ ಇಲ್ಲದೇ ಇರುವುದರಿಂದ ಕೇಂದ್ರ ಸರ್ಕಾರದ ಜವಳಿ ಖಾತೆಯ ಸಚಿವಾಲಯದಲ್ಲಿ ಬಾಕಿ ಇರುವದರಿಂದ ಯೋಜನೆ ಅನುಷ್ಠಾನಗೊಳಿಸಲು ಪತ್ರವನ್ನು ಬರೆದಿದ್ದಾರೆ. ಯಾವ ರೀತಿಯಾಗಿ ಹಣ ಪಾವತಿ ಮಾಡಬೇಕು ಎನ್ನುವ ಬಗ್ಗೆ ಸಹ ದೂರುದಾರರೇ ಪತ್ರವನ್ನು ಬರೆದಿದ್ದಾರೆ. ಆದರೆ 2ನೇ ಎದುರುದಾರರು ಸಾರ್ವಜನಿಕರ ಮತ್ತು ಖಾಸಗಿ ಸಂಸ್ಥೆ/ಕಂಪನಿಯ ಪಾಲುದಾರಿಕೆಯಲ್ಲಿ ಸಿದ್ಧ ಉಡುಪುಗಳ ಪಾರ್ಕ ಸ್ಥಾಪಿಸಲು ಇದೇ ಸಂಸ್ಥೆಯವರು ಮುಂದೆ ಬಂದಿದ್ದಾರೆ ಅಂತ ಬರೆದು ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್ ಇವರಿಂದಲೇ ರೂ.10,60,000/- ಹಣವನ್ನು ಪಾವತಿಸಿಕೊಂಡು ಫಾರ್ಮ ನಂ.1 ಪ್ರಮಾಣ ಪತ್ರವನ್ನು ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೆಟ್ ಲಿಮಿಟೆಡ್ ಇವರ ಹೆಸರಿಗೆ ಯಾವುದೇ ಆದೇಶವಿಲ್ಲದೇ ಕೊಟ್ಟಿರುವುದು ಕಂಡುಬರುತ್ತದೆ.

9. ತನಿಖಾಧಿಕಾರಿಗಳು ಸಹ ತಮ್ಮ ತನಿಖಾ ವರದಿಯಲ್ಲಿ ದಿನಾಂಕ: 17-1-2015 ರಂದು ಅಭಿವೃದ್ಧಿ ಅಧಿಕಾರಿಗಳು, ಕೆ.ಐ.ಎ.ಡಿ.ಬಿ., ಬಳ್ಳಾರಿ ಇವರಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ., ಬಳ್ಳಾರಿ ಇವರು ಬರೆದ ಪತ್ರದಲ್ಲಿ ಸದರಿ ಜಮೀನನ್ನು ಮೆ॥ ಬಳ್ಳಾರಿ ಗಾರ್‌ಮೆಂಟ್ಸ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಭೂಸ್ವಾಧೀನವಾಗಿದೆ ಅಂತ ನಮೂದಿಸಿ ಜಮೀನು ವರ್ಗಾವಣೆಯ ಬಗ್ಗೆ ಪ್ರಸ್ತಾಪಿಸಿರುವುದು ಕಂಡುಬರುತ್ತದೆ. ಈ ಹೆಸರಿನಲ್ಲಿ ಯಾವುದೇ ಆದೇಶ ಇಲ್ಲದೇ ಇರುವುದನ್ನು ಪರಿಶೀಲಿಸದೇ ಹಸ್ತಾಂತರಕ್ಕೆ ಸೂಚಿಸಿರುವುದು ಕ್ರಮಬದ್ಧವಾಗಿರುವುದಿಲ್ಲ ಅಂತ ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ-238/2016 ರಲ್ಲಿನ 2ನೇ ಎದುರುದಾರರಾದ ಶ್ರೀ ಈ.ಬಾಲಕೃಷ್ಣಪ್ಪ ಇವರು ಕರ್ತವ್ಯ ಲೋಪ ಎಸಗಿದ್ದಾರೆ ಎನ್ನಲು ಸಾಕಷ್ಟು ಆಧಾರಗಳಿವೆ.

10. ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ-238/2016 ರಲ್ಲಿನ 1ನೇ ಎದುರುದಾರರು ಮತ್ತು ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ-237/2016 ರಲ್ಲಿನ ಎದುರುದಾರರ ವಿರುದ್ಧ ಯಾವುದೇ ಆರೋಪಗಳು ಸಾಬೀತಾಗಿಲ್ಲವಾದ್ದರಿಂದ, ಸದರಿಯವರುಗಳ ವಿರುದ್ಧ ಪ್ರಕರಣವನ್ನು ಕೈಬಿಡಲಾಗಿದೆ.

11. ಆದುದರಿಂದ, ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ-238/2016 ರಲ್ಲಿನ 2ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(i)(ii) ಮತ್ತು (iii)ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು

ಕಂಡುಬರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಸದರಿ 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 22/2/18

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ